**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ,**
**ಕೆ.ಜಿ.ಎಫ್,**
**ಸಿ.ಸಿ. ಸಂಖ್ಯೆ: 460/2022**

**ಪಿ.ಡಬ್ಲೂ।7: ರಮೇಶ್ ಇ ಜಂಬಗಿ**

**ಪ್ರಮಾಣೀಕರಿಸಿದ ದಿನಾಂಕಃ 14-10-2025**

**ಪಾಟೀ ಸವಾಲುಃ-ಆರೋಪಿತರ ಪರ ಶ್ರೀ ಹೆಚ್ ಸಿ ಎಸ್ ವಕೀಲರಿಂದಃ-**

**1.** ಆ ದಿನ ನಾವು 4 ಮಂದಿ ಪೋಲೀಸರು ಕರ್ತವ್ಯದಲ್ಲಿ ಇದ್ದೆವು. ಆ ದಿನ ನಾವು 4 ಮಂದಿ ಸುಮಾರು 5-5 ಮೀಟರ್ ದೂರದಲ್ಲಿ ಇದ್ದು ಕರ್ತವ್ಯ ಮಾಡುತ್ತಿದ್ದೆವು. ಆ ದಿನ ನಾನು ಮತ್ತು ಚಾಸಾ13 ರವರು ರಸ್ತೆಯ ಬಲಬಾಗದಲ್ಲಿ ಕರ್ತವ್ಯದಲ್ಲಿದ್ದು ಉಳಿದ ಚಾಸಾ1 ಮತ್ತು ಚಾಸಾ14 ರವರು ಎಡಭಾಗದಲ್ಲಿ ಕರ್ತವ್ಯದಲ್ಲಿದ್ದರು. ಆ ಸಮಯದಲ್ಲಿ ಆರೋಪಿತರು ಎಡಕಡೆಯಾದಂತೆ ಬರುತ್ತಿದ್ದರು.ಆ ಸಮಯದಲ್ಲಿ ಚಾಸಾ1 ರವರು ರಸ್ತೆಯಲ್ಲಿ ಬರುತ್ತಿದ್ದ ವಾಹನಗಳಿಗೆ ನಿಲ್ಲಿಸಲು ಹೇಳುತ್ತಿದ್ದರು.

**2.** ನನ್ನ ಪ್ರಕಾರ ಆ ದಿನ ಆರೋಪಿತರು ಎಷ್ಟು ವೇಗದಲ್ಲಿ ತಮ್ಮ ವಾಹನದಲ್ಲಿ ಬರುತ್ತಿದ್ದರು ಎಂದು ನನಗೆ ಹೇಳಲಾಗುವುದಿಲ್ಲ. ಸದರಿ ನನ್ನ ಪ್ರಕಾರ ಆರೋಪಿತರು ಜೋರಾಗಿ ಗಾಡಿ ಓಡಿಸು, ಹತ್ತಿಸು ಎಂದೆಲ್ಲಾ ಹೇಳಿರುವ ವಿಚಾರ ನನಗೆ ಸುಮಾರು 30 ರಿಂದ 40 ಮೀಟರ್ ಅಂತರದಲ್ಲಿ ಕೇಳಿರುತ್ತಾರೆ. ಸಾಕ್ಷಿ ಮುಂದುವರೆದು ಅವರು ಜೋರಾಗಿ ಹೇಳಿರುತ್ತಾರೆ ಎನ್ನುತ್ತಾರೆ. ನನಗೆ ಆ ರೀತಿ ನಿರ್ದಿಷ್ಟವಾಗಿ ಯಾರು ಹೇಳುತ್ತಿದ್ದರು ಎಂದು ಹೇಳಲಾಗುವುದಿಲ್ಲ ಎಂದರೆ ಸರಿ. ಆ ಸಮಯದಲ್ಲಿ ಎಷ್ಟು ಮಂದಿ ಸಾರ್ವಜನಿಕರು ಅಲ್ಲಿ ಸೇರಿದ್ದರು ಎಂದು ನನಗೆ ಹೇಳಲಾಗುವುದಿಲ್ಲ. ಸದರಿ ರಸ್ತೆಯು ಹೆಚ್ಚು ಜನರು ಓಡಾಡುವ ಪ್ರದೇಶ ಎಂದರೆ ಸರಿ. ಆ ಸಮಯದಲ್ಲಿ ಸುಮಾರು 10 ರಿಂದ 15 ಜನ ಸಾರ್ವಜನಿಕರು ಅಲ್ಲಿ ಸೇರಿರುತ್ತಾರೆ. ಸದರಿ ಘಟನೆಯು ನಮ್ಮ ಠಾಣೆಯ ಮುಂಭಾಗ ಆಗಿರುತ್ತದೆ.

**3.** ಕ್ಯಾಸಂಬಹಳ್ಳಿ ಇಂದ ಬಸವನಗುಡಿ ಕ್ರಾಸ್ ಗೆ ರಸ್ತೆಯು ಸ್ವಲ್ಪ ಸ್ವಲ್ಪ ಇಳಿಜಾರಿನಿಂದ ಎತ್ತರದಲ್ಲಿ ಇದೆ ಎಂದರೆ ಸಾಕ್ಷಿಯು ಸ್ವಲ್ಪ ಮಟ್ಟಿನಲ್ಲಿ ಆ ರೀತಿ ಇದೆ ಎನ್ನುತ್ತಾರೆ. ಆ ಸಮಯದಲ್ಲಿ ನಾವು ನಮ್ಮ ಬಾರಿಕೇಡ್ ಗಳನ್ನು ಹಾಕಿರುತ್ತೇವೆ ಎಂದರೆ ಸರಿ. ಸಾಮಾನ್ಯವಾಗಿ ಸದರಿ ಬಾರಿಕೇಡ್ ನಾವು ಹಾಕಿದರೆ ವಾಹನಗಳು ನಿದಾನದಲ್ಲಿ ಬರುತ್ತವೆ ಎಂದರೆ ಸರಿ. ನನ್ನ ಪ್ರಕಾರ ಆ ದಿನ ಚಾಸಾ1 ರವರು ಪೆಟ್ಟಾಗಿ ಹಿಂದುಗಡೆ ಬಿದ್ದಿರುತ್ತಾರೆ. ಕ್ಯಾಸಂಬಹಳ್ಳಿಯಲ್ಲಿ ಸರ್ಕಾರಿ ಆಸ್ಪತ್ರೆ ಇದೆ ಎಂದರೆ ಸರಿ. ಆ ದಿನ ಚಾಸಾ18 ರವರು ಚಾಸಾ1 ರವರನ್ನು ಕೆಜಿಎಫ್ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲದೇ ಇದ್ದರೂ ಸಹ ಚಾಸಾ1 ರವರು

ನನ್ನ ಸಹೋದ್ಯೋಗಿ ಆದ ಕಾರಣ ಅವರಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆಜಿಎಫ್.**